

# ಕಪ್ಪೆಚಿಪ್ಪು

## ಕಡಲಜೀವಿಯ ಕೌತುಕದ ಕವಚ

ಸೃಷ್ಟಿಯ ಚಮತ್ಕಾರಕ್ಕೆ ಸಾಕ್ಷಿ ಎಂಬಂತಿರುವ ಕಡಲಾವಾರದ ಅಸಂಖ್ಯ ಜೀವಿಗಳಲ್ಲಿ ಮೃದ್ವಂಗಿಗಳೂ ಸೇರಿವೆ. ಈ ಮೃದ್ವಂಗಿಗಳಿಗೆ ರಕ್ಷಣಾ ಕವಚವಾಗಿರುವ ಕಪ್ಪೆಚಿಪ್ಪುಗಳ ಹಿಂದೆ ಕುತೂಹಲಕರ ಸಂಗತಿಗಳಿವೆ. ಇವುಗಳ ಸೃಷ್ಟಿ, ರಚನೆ, ವಿನ್ಯಾಸ ಎಲ್ಲವೂ ವಿಶಿಷ್ಟವೇ.

ವಿಶ್ವದಲ್ಲಿ ಅಂದಾಜು **2,00,000** ಪ್ರಭೇದದ ಮೃದ್ವಂಗಿಗಳಿದ್ದು, ಎಲ್ಲವೂ ತಮ್ಮದೇ ವಿಭಿನ್ನ ಶೈಲಿಯಲ್ಲಿ ಚಿಪ್ಪುಗಳನ್ನು ಸೃಷ್ಟಿಸುತ್ತವೆ. ಆದರದ್ದೇ ವಿಶಿಷ್ಟ ಗಾತ್ರ, ರೂಪ, ವರ್ಣಾಲಂಕಾರ, ವಿನ್ಯಾಸದ ಚಿಪ್ಪುಗಳು ಇರುತ್ತವೆ.



### ಕಪ್ಪೆಚಿಪ್ಪುಗಳ ವಿಧಗಳು

ಮೃದ್ವಂಗಿಗಳ ಪ್ರಭೇದದ ಆಧಾರದಲ್ಲಿ ಕಪ್ಪೆಚಿಪ್ಪುಗಳ ವಿಧಗಳನ್ನು ನಿರ್ಣಯಿಸಬಹುದು. ಅದರಂತೆ ಮುಖ್ಯವಾಗಿ ಐದು ರೀತಿಯ ವರ್ಗೀಕರಣ ಮಾಡಲಾಗಿದೆ. ಐದು ವಿಧಗಳಾದರೂ ಮೃದ್ವಂಗಿಗಳ ಪ್ರಭೇದಗಳ ಸಂಖ್ಯೆ ಒಂದೂವರೆ ಲಕ್ಷಕ್ಕೂ ಅಧಿಕ.



**ಗ್ಯಾಸ್ಟ್ರೊಪಾಡ್**
ಶಂಕು, ಶಂಖ, ಕವಡೆ ಇತ್ಯಾದಿ ಚಿಪ್ಪುಗಳನ್ನು ಸೃಷ್ಟಿಸುವ ಮೃದ್ವಂಗಿಗಳು

**ಬೈವಾಲ್ವ್**
ಎರಡು ಚಿಪ್ಪುಗಳನ್ನು ಒಳಗೊಂಡ ಮೃದ್ವಂಗಿ





**ಸೆಫಲೋಪಾಡ್**
ಸುರಳಿಯಾಕಾರದ ಚಿಪ್ಪನ್ನು ನಿರ್ಮಿಸುವ ಮೃದ್ವಂಗಿ

**ಸ್ಕಾಪೋಪಾಡ್**
ಕೊಂಬಿನ ಆಕಾರದ ಚಿಪ್ಪುಗಳನ್ನು ಸೃಷ್ಟಿಸುವ ಮೃದ್ವಂಗಿ





**ಪಾಲಿಪ್ಲಕೋಪೋರಾ**
ಎಂಟು ವಿಭಾಗಗಳನ್ನು ಒಳಗೊಂಡ ಚಿಪ್ಪು ನಿರ್ಮಿಸುವ ಮೃದ್ವಂಗಿ

ಕಪ್ಪೆ ಚಿಪ್ಪುಗಳ ಕುರಿತು ಅಧ್ಯಯನ ನಡೆಸುವವರನ್ನು 'ಕಾಂಕೋಲೊಜಿಸ್ಟ್' (concologist) ಎನ್ನುತ್ತಾರೆ.

ಮೃದ್ವಂಗಿಗಳು ಹುಟ್ಟಿನಿಂದಲೇ ಚಿಪ್ಪಿನ ಕವಚಗಳನ್ನು ನಿರ್ಮಿಸುತ್ತವೆ. ಬೆಳೆಯುತ್ತಾ ಹೋದಂತೆ ಶರೀರದ ಗಾತ್ರಕ್ಕೆ ಸರಿಹೊಂದುವಂತೆ ಚಿಪ್ಪನ್ನೂ ವಿಸ್ತರಿಸುತ್ತಾ ಹೋಗುತ್ತವೆ.

ಕ್ಯಾಂಪನೈಲ್ ಜೈಜಾಂಟಿಯಂ ಅಸಾಧಾರಣವಾದ ದೈತ್ಯ ಚಿಪ್ಪನ್ನು ಹೊಂದಿರುವ ಮೃದ್ವಂಗಿ ಎಂದು ಕರೆಸಿಕೊಂಡಿದೆ. ಗ್ಯಾಸ್ಟ್ರೊಪಾಡ್ ವರ್ಗಕ್ಕೆ ಸೇರಿರುವ ಈ ಮೃದ್ವಂಗಿ ಅವನತಿಯತ್ತ ಸರಿದಿದೆ.



ಗ್ಯಾಸ್ಟ್ರೊಪಾಡ್ ಹಾಗೂ ಬೈವಾಲ್ವ್‌ನ ಕಪ್ಪೆಚಿಪ್ಪುಗಳು ಸಾಮಾನ್ಯವಾಗಿ ಎಲ್ಲೆಡೆ ಸಿಗುತ್ತವೆ. ಬೈವಾಲ್ವ್ ಪ್ರಭೇದವೊಂದರಲ್ಲೇ ಸುಮಾರು **15000** ವಿಧಗಳಿವೆ.



ಸಾಮಾನ್ಯವಾಗಿ ಶೇ. 90ರಷ್ಟು ಶಂಕುಗಳು 'ಡೆಕ್ಸ್‌ಟ್ರಾಲ್' ಆಗಿರುತ್ತವೆ. ಅಂದರೆ, ಬಲಕ್ಕೆ ತೆರೆದುಕೊಂಡಿರುತ್ತವೆ. ಎಡಕ್ಕೆ ತೆರೆದುಕೊಂಡ ಚಿಪ್ಪುಗಳು ಅಪರೂಪವಾಗಿದ್ದು, ಅಮೂಲ್ಯ ಎಂದು ಪರಿಗಣಿಸಲಾಗಿದೆ.